ಕರ್ನಾಟಕ ವಿಧಾನಸಭೆ

ಗುರುವಾರ 8ನೇ ಆಗಸ್ಟ್ 2002 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10.20 ಗಂಟೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು : ಈಗ ಮೊದಲನೆಯದಾಗಿ, ರಾಜ್ಯಪಾಲರಾದ ಶ್ರೀಮತಿ ರಮಾದೇವಿಯವರನ್ನು ಕುರಿತ ವಿಶೇಷ ಪ್ರಸ್ತಾವನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸುತ್ತಾರೆ.

1. ವಿಶೇಷ ಪ್ರಸ್ತಾವನೆ

"ಕರ್ನಾಟಕ ರಾಜ್ಯದ 13ನೇ ರಾಜ್ಯಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ಹೋಗುತ್ತಿರುವ ಶ್ರೀಮತಿ ವಿ.ಎಸ್. ರಮಾದೇವಿ ಅವರಿಗೆ ಅಭಿನಂದನೆಗಳು ಮತ್ತು ಅವರ ಸ್ಥಾನದಲ್ಲಿ ನೇಮಕಗೊಂಡಿರುವ ಶ್ರೀ ಟಿ.ಎಸ್. ಚತುರ್ವೇದಿ ಅವರಿಗೆ ಸ್ವಾಗತಕೋರಿಕೆ."

+ ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ "ಕರ್ನಾಟಕ ರಾಜ್ಯದ 13ನೇ ರಾಜ್ಯಪಾಲರಾಗಿ ಸೇವೆ ಸಲ್ಲಿಸಿರುವ ಶ್ರೀಮತಿ ವಿ.ಎಸ್. ರಮಾದೇವಿ, ಅವರು ರಾಜ್ಯದ ಮೊದಲ ಮಹಿಳಾ ರಾಜ್ಯಪಾಲರಾಗಿ ಸಲ್ಲಿಸಿದ ಸೇವೆ ಚಿರಸ್ಮರಣೀಯ. ರಾಜ್ಯಪಾಲರ ಹುದ್ದೆಯನ್ನು ಅಲಂಕರಿಸುವ ಮುನ್ನ ಇವರು ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯಾಂಗ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ, ರಾಜ್ಯ ಸಭೆಯ ಮಹಾ ಕಾರ್ಯದರ್ಶಿಯಾಗಿ ಮತ್ತು ಮುಖ್ಯ ಚುನಾವಣಾ ಆಯುಕ್ತರಾಗಿ ಕಾರ್ಯನಿರ್ವಹಿಸಿ ಅಪಾರ ಅನುಭವವನ್ನು ಹೊಂದಿದ್ದರು. ದಿವಂಗತ ಶ್ರೀಮಾನ್ ಜಯಚಾಮರಾಜೇಂದ್ರ ಒಡೆಯರ್ ಅವರ ನಂತರ ಶ್ರೀಮತಿ ರಮಾದೇವಿಯವರು ವಿಧಾನ ಮಂಡಲದ ಜಂಟಿ ಅಧಿವೇಶನವನ್ನುದ್ದೇಶಿಸಿ ಕನ್ನಡದ ಕಂಪನ್ನು ವಿಧಾನ ಮಂಡಲದ ಹರಿಸಿದ ಏಕೈಕ ರಾಜ್ಯಪಾಲರು, ತಮ್ಮ ಕಾರ್ಯ ಅವಧಿಯಲ್ಲಿ ಭಾರತ ಸಂವಿಧಾನದಲ್ಲಿ ಅವರಿಗೆ ವಹಿಸಿರುವ ಅಧಿಕಾರ ಹಾಗೂ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದರೊಂದಿಗೆ ರಾಜ್ಯದ ಜನತೆಯ ಅಶೋತ್ತರಗಳಿಗೆ ಇವರು ಸ್ಪಂದಿಸಿರುತ್ತಾರೆ. ಕರ್ನಾಟಕ ಸರ್ಕಾರ ಹಾಗೂ ಈ ರಾಜ್ಯದ ಜನತೆಯು ಅವರ ಸೇವೆಯನ್ನು ಸದಾ ಸ್ಮರಿಸುತ್ತದೆ. ಅವರಿಗೆ ದೇವರು ಆಯುರಾರೋಗ್ಯವನ್ನು ಹಾಗೂ ತಮ್ಮ ಮುಂದಿನ ಜೀವನದಲ್ಲಿ ಯಶಸ್ಸನ್ನು ನೀಡಲಿ ಎಂದು ಕರ್ನಾಟಕದ ಜನತೆಯ ಪರವಾಗಿ ಕರ್ನಾಟಕ ವಿಧಾನ ಸಭೆಯು ಹಾರೈಸುತ್ತದೆ.

ತಮ್ಮ ಹುದ್ದೆಯಿಂದ ನಿವೃತ್ತರಾಗುತ್ತಿರುವ ಶ್ರೀಮತಿ ವಿ.ಎಸ್. ರಮಾದೇವಿ ಅವರಿಗೆ ಈ ಸದನವು ಸರ್ಕಾರದ ಹಾಗೂ ವಿಧಾನ ಸಭೆಯ ಸದಸ್ಯರ ಪ್ರಶಂಸೆಯನ್ನು ದಾಖಲುಗೊಳಿಸಿ ಅದನ್ನು ಅವರಿಗೆ ತಿಳಿಸುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಬೇಕೆಂದು ಈ ಸದನವು ಪ್ರಸ್ತಾಪಿಸುತ್ತದೆ.

ಶ್ರೀಮತಿ ವಿ.ಎಸ್. ರಮಾದೇವಿ ಇವರ ಸ್ಥಾನದಲ್ಲಿ ನೇಮಕಗೊಂಡಿರುವ ಶ್ರೀ ಟಿ.ಎನ್. ಚತುರ್ವೇದಿ ಇವರನ್ನು ಕರ್ನಾಟಕದ ರಾಜ್ಯಪಾಲರಾಗಿ ರಾಜ್ಯದ ಜನತೆಯ ಹಾಗೂ ವಿಧಾನ ಸಭೆಯ ಸದಸ್ಯರ ಪರವಾಗಿ ಕರ್ನಾಟಕ ವಿಧಾನ ಸಭೆಯು ಸ್ವಾಗತಿಸುತ್ತದೆ."

ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಸಭೆಯ ಒಟ್ಟಾರೆ ಒಪ್ಪಿಗೆಗೋಸ್ಕರ ಮಂಡಿಸಿದ್ದೇನೆ. ಕಳೆದ ಎರಡು ವರ್ಷಗಳಲ್ಲಿ ಈಗಿನ ರಾಜ್ಯಪಾಲರಾಗಿರತಕ್ಕಂಥ ಶ್ರೀಮತಿ ರಮಾದೇವಿ ಅವರ

ಜೊತೆಯಲ್ಲಿ ಬಹಳ ನಿಕಟವಾಗಿ ನಾನು ಮುಖ್ಯ ಮಂತ್ರಿಯಾಗಿ ಆಡಳಿತ ನಿರ್ವಹಣೆ ಮಾಡತಕ್ಕಂತಹ ವೇಳೆಯಲ್ಲಿ, ಅವರು ನಮ್ಮ ಬಗ್ಗೆ ತೋರಿಸಿರತಕ್ಕಂಥ ವಿಶೇಷವಾದ ಸೌಹಾರ್ದ ಮತ್ತು ವಿಶೇಷವಾದಂತಹ ಸಮಸ್ಯೆಗಳ ಆಳ ಅರಿವುಗಳನ್ನು ಅವರು ಅರ್ಥ ಮಾಡಿಕೊಂಡಿದ್ದರು. ನನ್ನ ಸೌಭಾಗ್ಯ ನಾನು ರಾಜ್ಯಸಭೆಯಲ್ಲಿ ಸದಸ್ಯನಾಗಿದ್ದ ಕಾಲದಲ್ಲಿ ಶ್ರೀಮತಿ ರಮಾದೇವಿಯವರು ರಾಜ್ಯಸಭೆಯ ಮಹಾ ಕಾರ್ಯದರ್ಶಿಗಳಾಗಿದ್ದರು. ಆದ್ದರಿಂದ ಅವರನ್ನು ಇಲ್ಲಿ ರಾಜ್ಯಪಾಲರಾಗಿ ನಿಯುಕ್ತಿಗೊಳಿಸಿದಾಗ ನನಗೆ ವ್ಯಕ್ತಿಗತವಾದ ಸಂತೋಷವನ್ನುಂಟು ಮಾಡಿತು. ಒಂದು ವಿಶೇಷವಾದ ಲಕ್ಷಣ ಹಾಗೂ ಗುಣವನ್ನು ನಾನು ಶ್ರೀಮತಿ ರಮಾದೇವಿಯವರಲ್ಲಿ ಕಂಡಿದ್ದು ಏನೆಂದರೆ, ಅಪಾರವಾದ ಕಾಳಜಿ ನಮ್ಮ ನಾಡಿನ ಮೇಲೆ, ನಮ್ಮ ರಾಜ್ಯದ ಮೇಲೆ ನಮ್ಮ ಭಾಷೆ ಮೇಲೆ, ನಮ್ಮ ಸಂಸ್ಕೃತಿ ಮೇಲೆ, ನಮ್ಮ ಜನ ಜೀವನ ಇವುಗಳೆಲ್ಲದರ ಬಗ್ಗೆ ವಿಶೇಷವಾದ ಮಮತೆ, ವಿಶೇಷವಾದ ಅಭಿಮಾನವನ್ನು ಸೂಕ್ತವಾದ ಸಂದರ್ಭಗಳಲ್ಲಿ ಅದಕ್ಕೆ ರೂಪವನ್ನು ಕೊಟ್ಟದ್ದು, ಅದನ್ನು ಪ್ರದರ್ಶಿಸಿದರು. ಕರ್ನಾಟಕ ಜನತೆಯ ಎಲ್ಲರ ಅಭಿಮಾನವನ್ನು, ಎಲ್ಲರ ಗೌರವವನ್ನು, ಎಲ್ಲರ ಪ್ರೀತಿ ವಿಶ್ವಾಸವನ್ನು ಶ್ರೀಮತಿ ರಮಾದೇವಿಯವರು ಗಳಿಸಿಕೊಂಡಿದ್ದರು. ಬಹುಶಃ ಇದು ಉತ್ಪ್ರೇಕ್ಷೆ ಅಲ್ಲ. ಹಿಂದೆ ಹಲವಾರು ಜನ ರಾಜ್ಯಪಾಲರುಗಳು ನಮ್ಮ ರಾಜ್ಯಕ್ಕೆ ಹೊರಗಡೆಯಿಂದ ಬಂದಿದ್ದರು. ಆದರೆ ಈ ಪ್ರಮಾಣದಲ್ಲಿ ಇನ್‌ವಾಲ್ವ್‌ಮೆಂಟ್ ಕಮಿಟ್‌ಮೆಂಟ್ ಇವುಗಳನ್ನು ನೋಡತಕ್ಕಂಥದ್ದು ಬಹಳ ವಿರಳ. ಶ್ರೀಮತಿ ರಮಾದೇವಿಯವರು ಒಬ್ಬ ಹೆಣ್ಣು ಮಗಳು ಆದ್ದರಿಂದ ತಾಯಂದಿರಿಗೆ ಇರಬೇಕಾದ ಸ್ವಾಭಾವಿಕವಾದ ಅನುಕಂಪ, ಸ್ವಾಭಾವಿಕವಾದ ಮಮತೆ, ಸ್ವಾಭಾವಿಕವಾಗಿ ಇನ್ನೊಬ್ಬರ ಕಷ್ಟವನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕೆಂದು ರೆಡ್‌ಕ್ರಾಸ್‌ಗೆ ವಿಶೇಷವಾದ ಒತ್ತು ಕೊಟ್ಟರು ಮತ್ತು ಅಂಗವಿಕಲರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ಅವರು ಪ್ರಯತ್ನ ಪಟ್ಟರು. ಸಮಾಜದಲ್ಲಿ ನಿಕೃಷ್ಟಕ್ಕೆ ಒಳಗಾಗಿರತಕ್ಕಂಥ ಎಲ್ಲಾ ವರ್ಗದ ಜನಗಳ ಸೇವೆ ಮಾಡಲಿಕ್ಕೆ ಅವರಿಗೆ ತಮ್ಮಿಂದ ಕೊಂಚ ಆದರೂ ಕೂಡ ಮಾನಸಿಕ ನೆಮ್ಮದಿ ಸಿಕ್ಕರೆ ಸಾಕು ಎಂಬ ದೃಷ್ಟಿಯಿಂದ ಶ್ರೀಮತಿ ರಮಾದೇವಿಯವರು ತಮ್ಮ ರಾಜ್ಯಪಾಲರ ಅವಧಿಯಲ್ಲಿ ನಮಗೆ ತೋರಿಸಿಕೊಟ್ಟಿದ್ದಾರೆ. ಇತರ ರಾಜ್ಯಪಾಲರಿಗೆ ಮೇಲ್ಪಂಕ್ತಿ ಆಗತಕ್ಕಂತಹ ರೀತಿಯಲ್ಲಿ ಆದರ್ಶಗಳನ್ನು ಅವರು ಬಿಟ್ಟು ಹೋಗುತ್ತಿದ್ದಾರೆ. ಇಂತಹ ರಾಜ್ಯಪಾಲರನ್ನು ಪಡೆದ ಕನ್ನಡ ನಾಡು ಅದೃಷ್ಟವಂತ ನಾಡು. ಅವರಿಗೆ ಶುಭ ಹಾರೈಸಿ, ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯಪಾಲರಾಗಿ ಸೇವೆ ಸಲ್ಲಿಸಿ ಶ್ರೀಮತಿ ವಿ.ಎಸ್. ರಮಾದೇವಿಯವರು ನಿವೃತ್ತಿಯಾಗಿ ಹೋಗುತ್ತಿದ್ದಾರೆ. ಅವರ ಸೇವೆ ಬಗ್ಗೆ, ಅವರು ಇಲ್ಲಿ ಹಾಕಿಕೊಟ್ಟಂಥ ಮಾರ್ಗಗಳು ಏನಿವೆ ಅದರ ಬಗ್ಗೆ ಅಭಿನಂದನೆ ಸಲ್ಲಿಸುವಂತಹ ನಿರ್ಣಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಮಂಡನೆ ಮಾಡಿದ್ದಾರೆ, ಅವರ ಆ ನಿರ್ಣಯಕ್ಕೆ ನನ್ನ ಪಕ್ಷದ ಪರವಾಗಿ ಪ್ರತಿ ಪಕ್ಷದ ನಾಯಕನಾಗಿ ನಾನು ಬೆಂಬಲವನ್ನು ನೀಡುತ್ತಿದ್ದೇನೆ. ನಾನು ಮುಖ್ಯವಾಗಿ ಹೇಳುವಂತಹದ್ದು ಶ್ರೀಮತಿ ವಿ.ಎಸ್. ರಮಾದೇವಿಯವರು ನಮ್ಮ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿ ಪ್ರಮಾಣವಚನ ಸ್ವೀಕಾರ ಮಾಡಿದ ಸಂದರ್ಭದಲ್ಲಿ ಮೊಟ್ಟ ಮೊದಲು ಒಂದು ಸಂತೋಷವಾಗಿದ್ದು, ಒಬ್ಬರು ಮಹಿಳೆ ಈ ಸ್ಥಾನವನ್ನು ಅಲಂಕಾರ ಮಾಡುತ್ತಾರೆಂದು, ನಮ್ಮ ಮಹಿಳಾ ವರ್ಗಕ್ಕೆ ಮತ್ತು ಜನಸಾಮಾನ್ಯರಲ್ಲೂ ಬಹಳ ಸಂತೋಷದ ಸಂಗತಿ ಆಯಿತು. ಮುಂದೆ ಬರುವಂತಹ ದಿನಗಳಲ್ಲಿ

ಅವರ ಕಾರ್ಯ ವೈಖರಿ ನಡವಳಿಕೆ ಇವೆಲ್ಲಾ ನೋಡಿದಾಗ ನಿಜವಾಗಿ ರಾಜ್ಯಪಾಲರು ಹೇಗೆ ಇರಬೇಕು, ಒಬ್ಬ ಆದರ್ಶ ರಾಜ್ಯಪಾಲರು ಹೇಗೆ ಇರಬೇಕು ಎನ್ನುವುದನ್ನು ಸಾಧನೆ ಮಾಡಿ ತೋರಿಸಿದವರು ಶ್ರೀಮತಿ ವಿ.ಎಸ್. ರಮಾದೇವಿಯವರು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿಯವರೆಗೆ ರಾಜ್ಯಪಾಲರು ಎಂದರೆ ಒಂದು ಉತ್ಸವ ಮೂರ್ತಿ ಇದ್ದ ಹಾಗೆ. ಅದಕ್ಕೆ ಸಂವಿಧಾನಬದ್ದವಾದ ಸ್ಥಾನಮಾನ ಇದೆ. ಚೌಕಟ್ಟು ಇದೆ. ಆ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು, ಗಣ ರಾಜ್ಯೋತ್ಸವದ ದಿವಸ ಧ್ವಜಾರೋಹಣ ಮಾಡುವುದು ಮತ್ತು ಜಂಟಿ ಅಧಿವೇಶನ ನಡೆದ ಸಂದರ್ಭದಲ್ಲಿ ಸರ್ಕಾರದ ಒಂದು ಅಭಿಪ್ರಾಯಗಳು ಇರಬಹುದು, ವಿಚಾರಗಳು ಇರಬಹುದು, ಅವರ ಪಾಲಿಸಿ ಇರಬಹುದು, ಅದನ್ನು ಅವರ ಮುಖಾಂತರ ರಾಜ್ಯಪಾಲರ ಭಾಷಣವನ್ನು ಪ್ರಚಾರಪಡಿಸುವುದು ಇದು ಒಂದು ಸಂಪ್ರದಾಯ. ಆ ರೀತಿಯಾಗಿ ಉತ್ಸವ ಮೂರ್ತಿಯಾಗಿ ಕಟ್ಟುಪಾಡಿನಲ್ಲಿ ಆ ರಾಜ್ಯಪಾಲರ ಹುದ್ದೆ ಇತ್ತು. ಆದರೆ ಶ್ರೀಮತಿ ವಿ.ಎಸ್. ರಮಾದೇವಿಯವರು ಬಂದು ಆ ಕಟ್ಟುಪಾಡು ತೆಗೆದು ಹಾಕಿ ಜನಸಾಮಾನ್ಯರ ಬಳಿಯೂ ರಾಜ್ಯಪಾಲರು ಹೋಗಬಹುದು, ಜನಸಾಮಾನ್ಯರೂ ಸಹಿತ ರಾಜಭವನಕ್ಕೆ ಬರಬಹುದು ಎನ್ನುವಂತಹ ವಾತಾವರಣವನ್ನು ನಿರ್ಮಾಣ ಮಾಡಿದವರು ಶ್ರೀಮತಿ ವಿ.ಎಸ್. ರಮಾದೇವಿಯವರು. ಹೀಗಾಗಿ ಅವರಿಗೆ ನಾವು ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ರಾಜ್ಯಪಾಲರ ನಡುವೆ ಮತ್ತು ಜನಸಾಮಾನ್ಯರ ನಡುವೆ ನಾವು ಹಿಂದೆ ಏನು ನೋಡುತ್ತಿದ್ದೆವು, ಜನ ಪ್ರತಿನಿಧಿಗಳಾಗಿದ್ದರೂ, ಜನ ಪ್ರತಿನಿಧಿಗಳೂ ಸಹ ರಾಜಭವನಕ್ಕೆ ಹೋಗಬೇಕಾದರೆ ಬಹಳಷ್ಟು ಹೆಸಿಟೇಟ್ ಮಾಡುತ್ತಿದ್ದೆವು. ಆದರೆ ಒಬ್ಬ ಜನ ಪ್ರತಿನಿಧಿ, ಒಬ್ಬ ಜನ ಸಾಮಾನ್ಯ ರಾಜ್ಯದ ರಾಜಭವನಕ್ಕೆ ಯಾವುದೇ ಒಂದು ಸಂದರ್ಭದಲ್ಲಿ ಹೋಗುವಂತಹ ವಾತಾವರಣ ನಿರ್ಮಾಣ ಮಾಡಿದ್ದಾರೆ. ಫ್ರೀಯಾಗಿ ಅವರ ಜೊತೆ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡಿದವರು ವಿ.ಎಸ್. ರಮಾದೇವಿಯವರು, ಅವರು ರಾಜ್ಯಪಾಲರ ಹುದ್ದೆಗೆ ವಿಶೇಷ ಸ್ಥಾನಮಾನ ಗೌರವ ತಂದುಕೊಟ್ಟವರು. ಯಾವ ರೀತಿಯಲ್ಲಿ ಚುನಾವಣಾ ಆಯೋಗದ ಆಯುಕ್ತರಾಗಿ ಟಿ.ಎನ್. ಶೇಷನ್‌ರವರನ್ನು ನೇಮಕ ಮಾಡಿದ ಸಂದರ್ಭದಲ್ಲಿ ಚುನಾವಣಾ ಆಯೋಗದ ಬಗ್ಗೆ ನಾವು ಯಾವ ರೀತಿ ನೆನಪು ಇಟ್ಟುಕೊಳ್ಳುತ್ತೇವೆ ಹಾಗೆ ವಿ.ಎಸ್. ರಮಾದೇವಿಯವರು ಈ ರಾಜ್ಯಪಾಲರ ಹುದ್ದೆಯಿಂದ ಅವರು ನಿವೃತ್ತಿಯಾದ ಮೇಲೆ ಸಹಿತ ಅವರ ಬಗ್ಗೆ ಸದಾ ಕಾಲ ನೆನಪು ಮಾಡಿಕೊಳ್ಳುವ ವಸ್ತು ಸ್ಥಿತಿಯನ್ನು ಅವರು ನಿರ್ಮಾಣ ಮಾಡಿದ್ದಾರೆ. ಇನ್ನೊಂದು ಪ್ರಮುಖವಾದ ವಿಚಾರ, ಆಂಧ್ರದಲ್ಲಿ ಅವರು ಹುಟ್ಟಿ ಬೆಳೆದು, ದೆಹಲಿ ಮತ್ತು ರಾಷ್ಟ್ರದ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡಿ ಸರ್ಕಾರದ ಸೇವೆಯಲ್ಲಿ ಇದ್ದರೂ ಸಹಿತ, ಕರ್ನಾಟಕಕ್ಕೆ ಬಂದ ಮೇಲೆ ಕರ್ನಾಟಕ ರಾಜ್ಯದ ಬಗ್ಗೆ ಅಭಿಮಾನದಿಂದ ಮಾತನಾಡುವುದು, ಕನ್ನಡ ಭಾಷೆ ಬಗ್ಗೆ ಅಭಿಮಾನ ಬೆಳೆಸುವುದು, ಕನ್ನಡವನ್ನು ಕಲಿತು ಕನ್ನಡ ಸಂಸ್ಕೃತಿ ತಿಳಿದುಕೊಂಡು ಇಲ್ಲಿ ಇದ್ದಂತಹ ಇತಿಹಾಸದಲ್ಲಿ ಇದ್ದ ಮಠಗಳ ಪರಂಪರೆ ಇನ್ನಿತರ ವ್ಯವಸ್ಥೆಗಳ ಬಗ್ಗೆ ತಿಳಿದುಕೊಂಡು ಅಭ್ಯಾಸ ಮಾಡಿ ಅದನ್ನು ಪ್ರಚುರಪಡಿಸಿದಂತಹ ವ್ಯಕ್ತಿ ಶ್ರೀಮತಿ ವಿ.ಎಸ್. ರಮಾದೇವಿಯವರು. ನಾನು 1994 ರಿಂದ 1999ರವರೆಗೆ ಈ ಸದನದಲ್ಲಿದ್ದೆ. ಯಾವ ಸಂದರ್ಭದಲ್ಲಿ ಕೂಡ ರಾಜ್ಯಪಾಲರು ತಮ್ಮ ಭಾಷಣವನ್ನು ಕನ್ನಡವನ್ನು ವಾಚನ ಮಾಡಿದ್ದು ನೋಡಲಿಲ್ಲ. ಆದರೆ ಶ್ರೀಮತಿ ವಿ.ಎಸ್. ರಮಾದೇವಿಯವರು ಯಾವಾಗ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡರು ಅಲ್ಲಿಂದ ಇಲ್ಲಿಯವರೆಗೆ ಕನ್ನಡದಲ್ಲಿ

ರಾಜ್ಯಪಾಲರ ಭಾಷಣವನ್ನು ವಾಚನ ಮಾಡಿದ್ದು ಮೊಟ್ಟಮೊದಲು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ನಮಗೆ ಒಂದು ಅಭಿಮಾನ ಎನಿಸುತ್ತದೆ. ಆ ಭಾಷೆ ಅಭಿಮಾನ ಏನಿದೆ ಅದು ಎಲ್ಲಕ್ಕಿಂತ ಹೆಚ್ಚಿನದು. ಆ ಭಾಷೆಯಲ್ಲಿ ಅವರು ತಮ್ಮ ಮೆರುಗನ್ನು ನೀಡಿ ಅವರು ಅವರ ಸ್ಥಾನಮಾನದ ಮುಖಾಂತರ ಕನ್ನಡಕ್ಕೆ ಹೆಚ್ಚಿನ ಅಭಿಮಾನ ಮೂಡಿಸಿದ್ದು ಶ್ರೀಮತಿ ವಿ.ಎಸ್. ರಮಾದೇವಿಯವರು, ಯಾವುದೇ ಒಂದು ಪ್ರದೇಶದಲ್ಲಿ ಐತಿಹಾಸಿಕ ಇರಬಹುದು, ಒಂದು ಪರಂಪರೆ ಇರಬಹುದು, ನಾನು ಧಾರವಾಡ ತಾಲ್ಲೂಕಿನಲ್ಲಿ ಒಂದು ಸಾರಿ ಯಾವುದೋ ಒಂದು ಸಣ್ಣ ಗ್ರಾಮ ಅದರ ಬಗ್ಗೆ ವಾರ ಪತ್ರಿಕೆಯಲ್ಲಿ ಬಂದಿತ್ತು. ಅಲ್ಲಿ ಅವಿಭಕ್ತ ಕುಟುಂಬ ಇದೆ, ನಮ್ಮ ಭಾರತದ ಸಂಸ್ಕೃತಿಯನ್ನು, ಪರಂಪರೆಯನ್ನು ನೋಡುವಂತಹ 4-5-6 ತಲೆಮಾರಿನ ಅವಿಭಕ್ತ ಕುಟುಂಬ ಒಂದೇ ಮನೆಯಲ್ಲಿ ವಾಸವಾಗಿದ್ದಾರೆಂದು ವಾರ ಪತ್ರಿಕೆಯಲ್ಲಿ ಬಂದಿತ್ತು. ಅದನ್ನು ಶ್ರೀಮತಿ ರಮಾದೇವಿಯವರು ಪತ್ರಿಕೆಯ ಮುಖಾಂತರ ತಿಳಿದುಕೊಂಡು ಕೇವಲ ಆ ಪತ್ರಿಕೆಯಲ್ಲಿ ಬಂದಂತಹ ಒಂದೇ ವಾರದಲ್ಲಿ ಆ ಗ್ರಾಮಕ್ಕೆ ಭೇಟಿ ಕೊಟ್ಟರು. ಆ ಒಂದು ಅವಿಭಕ್ತ ಕುಟುಂಬದಲ್ಲಿ ಸಾವಿರಾರು ಮಂದಿ ಸದಸ್ಯರುಗಳಿದ್ದರು. ಆ ಕುಟುಂಬದ ಭೇಟಿ ಮಾಡಿ ಅವರಿಗೆ ಅಭಿವಂದನೆಯನ್ನು ಸಲ್ಲಿಸಿ ಈ ರೀತಿಯಾದಂಥ ವಾತಾವರಣ ಇಡೀ ದೇಶದಲ್ಲಿ ಮೂಡಬೇಕು, ಆ ರೀತಿಯಾದರೆ ಮಾತ್ರ ಭಾರತ ಒಂದು ದೊಡ್ಡ ಬಲಾಢ್ಯ ರಾಷ್ಟ್ರವಾಗಿ ಆಗಲು ಸಾಧ್ಯ ಎನ್ನುವಂಥ ಮಾತನ್ನು ಅಲ್ಲಿ ಹೇಳಿ ಹೋದರು. ಈ ರೀತಿ ಯಾವುದಾದರೂ ಐತಿಹಾಸಿಕ ದೇವಸ್ಥಾನ ಇದ್ದರೆ ಅಲ್ಲಿಗೆ ಹೋಗುವಂಥದ್ದು ಅದಕ್ಕೆ ಒಂದು ಪ್ರೋತ್ಸಾಹ ಕೊಡುವಂಥದ್ದು, ಈ ರೀತಿಯಾದಂಥ ವಾತಾವರಣ ನಿರ್ಮಾಣ ಮಾಡಿದಂಥವರು ಶ್ರೀಮತಿ ವಿ.ಎಸ್. ರಮಾದೇವಿಯವರು ಮತ್ತು ಅದೇ ರೀತಿ ಯಾವುದೇ ಒಂದು ಇವೊತ್ತು ಸಣ್ಣ ಪುಟ್ಟ ಕಾರ್ಯಕ್ರಮ ಇರಲಿ ಯಾವುದೇ ಕಾರ್ಯಕ್ರಮಕ್ಕೆ ಭಾಗವಹಿಸುವಾಗ ಸಾಮಾಜಿಕ ಕಳಕಳಿಯನ್ನು ಮತ್ತು ಇನ್ನಿತರ ಕಳಕಳಿಯನ್ನು ಅವರು ವ್ಯಕ್ತಪಡಿಸಿದರು ಮತ್ತು ತಮಗೆ ಏನನ್ನಿಸುತ್ತದೆ ಅದನ್ನು ನೇರ ಮಾತುಗಳಲ್ಲಿ ಹೇಳಿದಂಥವರು ಶ್ರೀಮತಿ ವಿ.ಎಸ್. ರಮಾದೇವಿಯವರು. ಹೀಗಾಗಿ ಒಬ್ಬ ಆದರ್ಶ ರಾಜ್ಯಪಾಲರು ಯಾವ ರೀತಿಯಾಗಿ ಕೆಲಸ ಮಾಡಬೇಕು ಎನ್ನುವಂಥದ್ದನ್ನು ಇವೊತ್ತು ಅವರು ಮಾರ್ಗದರ್ಶನ ಹಾಕಿದ್ದಾರೆ. ಅದು ಎಲ್ಲರಿಗೂ ಮಾರ್ಗದರ್ಶನ ಆಗಲಿ ಎನ್ನುವಂಥದ್ದನ್ನು ಹೇಳಿ ಅವರ ಒಂದು ಸೇವೆಯನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ ಮತ್ತು ಜನರಿಂದ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾರೆ. ಅವರಿಗೆ ನಾನು ನಮ್ಮ ಪಕ್ಷದ ಪರವಾಗಿ ವಿಶೇಷವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನು ಅದೇ ರೀತಿಯಾಗಿ ಇವೊತ್ತು ಶ್ರೀಮಾನ್ ಟಿ.ಎನ್. ಚತುರ್ವೇದಿಯವರು ಹೊಸದಾಗಿ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ. ಶ್ರೀ ಟಿ.ಎನ್. ಚತುರ್ವೇದಿಯವರೂ ಕೂಡ ಅದೇ ರೀತಿಯ ಗುಣಗಳನ್ನು ಹೊಂದಿರುವಂಥ ವ್ಯಕ್ತಿ. ನಾನು ಮೊನ್ನೆ ದಿಲ್ಲಿಗೆ ಹೋದಂಥ ಸಂದರ್ಭದಲ್ಲಿ ನಮ್ಮ ನಾಯಕರ ಜೊತೆ ಅವರಿಗೆ ನಾನು ಅಭಿನಂದನೆಗಳನ್ನು ಹೇಳುವುದಕ್ಕೆ ಹೋಗಿದ್ದೆ. ಶ್ರೀ ಚತುರ್ವೇದಿಯವರು ಬಹಳ ಮೃದು **ಸ್ವಭಾವದವರು. ಬಹಳ ಒಂದು ಸೌಜನ್ಯದ ಸ್ವಭಾವದವರು. ಅವರು ತಮ್ಮ ಸೇವಾವಧಿಯಲ್ಲಿ** ಹೊಂದಿದ್ದ ಒಂದೊಂದು ಹುದ್ದೆಗೂ ಒಂದೊಂದು ಮಹತ್ವವನ್ನು ತಂದಂಥವರು. ಶ್ರೀ ಚತುರ್ವೇದಿಯವರು ಹಿಂದೆ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಹುದ್ದೆಯಲ್ಲಿದ್ದಾಗ ಸಿ.ಎ.ಜಿ. ರಿಪೋರ್ಟ್ ಎಂದರೆ ಅದಕ್ಕೆ ಏನು ಮಹತ್ವವಿದೆ ಎನ್ನುವುದನ್ನು ಹೇಳಿದಂಥವರು.

ಸಿ.ಎ.ಜಿ. ರಿಪೋರ್ಟ್ ಎಂದರೆ ಹೇಗಿರಬೇಕು, ಅದರಲ್ಲಿ ಏನೇನು ಅಂಶಗಳು ಅಡಕವಾಗಿರಬೇಕು, ಯಾವುದನ್ನು ಸ್ಪಷ್ಟವಾಗಿ ಹೇಳಬೇಕು, ನೇರವಾಗಿರಬೇಕು ಎನ್ನುವ ಬಗ್ಗೆ ಸಿ.ಎ.ಜಿ. ರಿಪೋರ್ಟ್‌ನಲ್ಲಿ ಕೆಲವೊಂದು ಅಂಶಗಳ ಬಗ್ಗೆ ಅವರೇನು ಕೆಲವೊಂದು ಅಂಶಗಳನ್ನು ಹೊರಹಾಕಿದರು ಅದರ ಮೇಲೆ ಆ ಚತುರ್ವೇದಿಯವರ ಹೆಸರು ಇಡೀ ರಾಷ್ಟ್ರದಲ್ಲಿ ಪ್ರಸಿದ್ಧಿಯಾಗಿದ್ದನ್ನು ನಾವು ನೋಡುತ್ತಾ ಇದ್ದೇವೆ. ಹೀಗಾಗಿ ಒಬ್ಬ ಕಟ್ಟುನಿಟ್ಟಿನ ಅಧಿಕಾರಿ, ಒಬ್ಬ ಸೌಜನ್ಯದ ಅಧಿಕಾರಿ, ಸಂಭಾವಿತ ವ್ಯಕ್ತಿಯಾದ ಶ್ರೀ ಚತುರ್ವೇದಿಯವರು ನಮ್ಮ ರಾಜ್ಯದ ನೂತನ ರಾಜ್ಯಪಾಲರಾಗಿ ಬರುತ್ತಾ ಇದ್ದಾರೆ. ಅವರನ್ನು ನಾನು ಅದರದಿಂದ ಬರಮಾಡಿಕೊಂಡು ಅಭಿನಂದನೆಗಳನ್ನು ಸಲ್ಲಿಸಿ, ಇವೊತ್ತೇನು ಅಧ್ಯಕ್ಷರಾದ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರಿ ಅದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳು ತಂದಿರುವ ರಾಜ್ಯಪಾಲರನ್ನು ಅವರ ಅವಧಿಯನ್ನು ಮುಗಿಸಿ ಹೋಗುತ್ತಾ ಇರತಕ್ಕಂಥ ಸಂದರ್ಭದಲ್ಲಿ ಅವರ ಸೇವೆಗೆ ಅಭಿನಂದನೆಗಳನ್ನು ಸಲ್ಲಿಸತಕ್ಕ ಈ ಪ್ರಸ್ತಾವನೆಗೆ ನಾನು ಬೆಂಬಲವನ್ನು ಸೂಚಿಸುತ್ತೇನೆ. ಈ ವಿಚಾರದಲ್ಲಿ ನಿನ್ನೆ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಜೊತೆಗೆ ಈ ರಾಷ್ಟ್ರದ ಒಬ್ಬ ಸಮರ್ಥ, ಪ್ರಾಮಾಣಿಕ ಅಧಿಕಾರಿಯಾದ ಶ್ರೀ ಟಿ.ಎನ್. ಚತುರ್ವೇದಿಯವರು ನಮ್ಮ ರಾಜ್ಯಕ್ಕೆ ರಾಜ್ಯಪಾಲರಾಗಿ ಬರುತ್ತಾ ಇರುವುದು ಬಹಳ ಸಂತೋಷದ ವಿಷಯ. ಈಗಾಗಲೇ ದೆಹಲಿಯಲ್ಲಿ ಪ್ರತಿಕ್ರಿಯೆಯನ್ನು ಮಾಡಿ ನಮ್ಮ ಮುಖ್ಯಮಂತ್ರಿಗಳು ಇದನ್ನು ಸಹಿತ ಸ್ವಾಗತ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ಆಗಿರತಕ್ಕಂಥ ರಾಜಕೀಯ ಬೆಳವಣಿಗೆ ರಾಜ್ಯಪಾಲರ ಹುದ್ದೆಗಳಿಗೆ ಬಹಳ ದೊಡ್ಡ ಒಂದು ಮಹತ್ವ ಬರುತ್ತಿದೆ. ಕಾರಣ ಒಂದು ಕಾಲದಲ್ಲಿ ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಆಡಳಿತ ನಡೆಸುತ್ತಿತ್ತು. ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಕೂಡ ಒಂದೆರಡು ರಾಜ್ಯಗಳನ್ನು ಬಿಟ್ಟರೆ ಮಿಕ್ಕೆಲ್ಲಾ ರಾಜ್ಯಗಳಲ್ಲೂ ಕಾಂಗ್ರೆಸ್ಸೇ ಆಡಳಿತವನ್ನು ನಡೆಸುತ್ತಿತ್ತು. ಆದರೆ ಇವೊತ್ತು ಆ ರೀತಿಯ ಪರಿಸ್ಥಿತಿ ಇಲ್ಲ. ಕಾಂಗ್ರೆಸ್ ಇರಲಿ ಅಥವಾ ಯಾವುದೇ ರಾಷ್ಟ್ರೀಯ ಪಕ್ಷ ಎಂದು ಹೇಳಿಕೊಳ್ಳುವಂಥ ಪಕ್ಷಗಳೂ ಕೂಡ ಬೇರೆ ಬೇರೆ ಸಣ್ಣಪುಟ್ಟ ಪಕ್ಷಗಳ ಸಹಕಾರದಿಂದಲೇ ಸರ್ಕಾರವನ್ನು ನಡೆಸತಕ್ಕಂಥ ಒಂದು ಯುಗ ಇವೊತ್ತು ಪ್ರಾರಂಭವಾಗಿದೆ. ಅದು ಸಧ್ಯದಲ್ಲಿ ಸಮಾಪ್ತಿಯಾಗತಕ್ಕಂಥ ಕಾಲ ನಾವು ಕಾಣುತ್ತಿಲ್ಲ. ಇಂಥ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ಇರತಕ್ಕಂಥ ಸಂಬಂಧ ಬಹಳ ಚೆನ್ನಾಗಿ ಇರಬೇಕಾಗುತ್ತದೆ. ಇದು ಒಂದು ಭಾಗ. ಇನ್ನೊಂದು ಭಾಗ ಬಹಳ ಪ್ರಮುಖವಾದ ವಿಚಾರ. ಅನೇಕ ರಾಜ್ಯಪಾಲರುಗಳು ಕೇಂದ್ರ ಸರ್ಕಾರದ ಕೈಗೊಂಬೆಯ ರೀತಿಯಲ್ಲಿ ಸಂವಿಧಾನದಲ್ಲಿರತಕ್ಕಂಥ ಕೆಲವು ವಿಚಾರಗಳನ್ನು ಮನ್ನಣೆಗೆ ತೆಗೆದುಕೊಳ್ಳದೇ ರಾಜ್ಯ ಸರ್ಕಾರಗಳನ್ನು ಅನೇಕ ಕಾರಣಗಳಿಗೋಸ್ಕರ ರದ್ದು ಮಾಡಿರುವಂಥದ್ದನ್ನು ನಾವು ನೋಡಿದ್ದೇವೆ. ಅದೃಷ್ಟವಶಾತ್ ಸುಪ್ರೀಂ ಕೋರ್ಟಿನಲ್ಲಿ ಮಾನ್ಯ ಬೊಮ್ಮಾಯಿಯವರ ಒಂದು ಪಿಟಿಶನ್ ಮೇಲೆ ಆದಂಥ ಕೇಸ್‌ನ್ನು ಮತ್ತು ಅದರ ನಂತರ ಆ ರೀತಿಯ ಬೆಳವಣಿಗೆಗಳು ದೇಶದಲ್ಲಿ ಆಗುತ್ತಿಲ್ಲ. ಇದು ಒಂದು ಆರೋಗ್ಯಕರವಾದ ಬೆಳವಣಿಗೆ ಎಂದು ನಾನು ತಿಳಿದಿದ್ದೇನೆ. ಆದ್ದರಿಂದಾಗಿಯೇ ರಾಜ್ಯಪಾಲರ ಹುದ್ದೆಗಳು ಬಹಳ ಮುಖ್ಯವಾದವುಗಳಾಗಿವೆ ಎಂದು ಹೇಳಬಯಸುತ್ತೇನೆ. ಕೆಲವು ಸಾರಿ ವಿಶೇಷವಾಗಿ ಕೆಲವು

ರಾಜ್ಯಗಳನ್ನು ನೋಡಿದ್ದೇವೆ, ನಾಲ್ಕು ಸೀಟು, ಐದು ಸೀಟು, ಮೂರು ಸೀಟುಗಳ ಅಂತರವಿರುತ್ತದೆ. ಆಗ ರಾಜ್ಯಪಾಲರಿಗೆ ಬೇಕಾಗುವ ರೀತಿಯಲ್ಲಿ ಸರ್ಕಾರಗಳನ್ನು ರಚನೆ ಮಾಡತಕ್ಕಂಥದ್ದು ಇವೆ. ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡತಕ್ಕಂಥದ್ದು, ಆಡಳಿತ ಪಕ್ಷದ ಕೈಗೊಂಬೆಗಳಾಗತಕ್ಕಂಥದ್ದು, ಇದೆಲ್ಲಾ ಆಗತಕ್ಕಂಥದ್ದನ್ನು ಇತ್ತೀಚಿನ ದಿನಗಳಲ್ಲಿ ನಾವು ನೋಡುತ್ತಾ ಇದ್ದೇವೆ. ಆದರೆ ಅದಕ್ಕೆ ಹೊರತಾಗಿ ನಾವು ಈ ದಿವಸ ನಮ್ಮ ಶ್ರೀಮತಿ ರಮಾದೇವಿಯವರನ್ನು ನಾವು ನೋಡಿದ್ದೇವೆ. ನಿಜಕ್ಕೂ ಅವರ ಬಗ್ಗೆ ಬಹಳ ದೊಡ್ಡ ಅಭಿಮಾನವಿದೆ. ಅವರು ಯಾವುದೇ ಸಂದರ್ಭದಲ್ಲಿಯೂ ಅವರ ಭಾವನೆಗಳಿಗೆ ಅವರು ತಮ್ಮ ಅಭಿಪ್ರಾಯ ವ್ಯಕ್ತಮಾಡಲಿಕ್ಕೆ ಅವಕಾಶ ಕೊಡಲಿಲ್ಲ. ಮುಖ್ಯಮಂತ್ರಿಗಳು, ಆಡಳಿತ ಪಕ್ಷದ ನಾಯಕರು, ಅವರನ್ನು ಎಷ್ಟು ವಿಶ್ವಾಸದಿಂದ ನೋಡುತ್ತಾ ಇದ್ದರೋ ಅಷ್ಟೇ ವಿಶ್ವಾಸದಿಂದ ನಾವು ಅನೇಕ ಸಂದರ್ಭಗಳಲ್ಲಿ ಸಂದಿಗ್ಧಗಳಲ್ಲಿ ಅವರನ್ನು ಹೋಗಿ ಭೇಟಿ ಮಾಡಿದ್ದೇವೆ. ಹೀಗೆ ಭೇಟಿ ಮಾಡಿದಂಥ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಅನೇಕ ರೀತಿಯ ಪಿಟಿಶನ್‌ಗಳನ್ನು ಕೊಟ್ಟಿದ್ದೇವೆ, ಮೆಮೊರಾಂಡಮ್‌ಗಳನ್ನು ಸಬ್‌ಮಿಟ್ ಮಾಡಿದ್ದೇವೆ. ಆ ಸಂದರ್ಭದಲ್ಲಿಯೂ ಸಹಿತ ಅವರು ಸಂವಿಧಾನಬದ್ಧವಾಗಿ ಎಷ್ಟು ಮಾತನಾಡಬಹುದೋ ಅಷ್ಟೇ ಮಾತನಾಡಿದ್ದಾರೆ, ನಮಗೂ ಸಹಿತ ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥ ಭಾವನೆ ನಮಗೆ ಅನ್ನಿಸುತ್ತಿತ್ತು ಮತ್ತು ವಿಶೇಷವಾಗಿ ಈ ಸರ್ಕಾರ ವಿಶ್ವವಿದ್ಯಾನಿಲಯದ ಬಗ್ಗೆ ರಾಜ್ಯಪಾಲರಿಗೆ ಇದ್ದಂಥ ಅಧಿಕಾರವನ್ನು ಕಿತ್ತುಕೊಂಡಂಥ ಸನ್ನಿವೇಶದಲ್ಲಿಯೂ ಕೂಡ ಅವರು ತಮ್ಮ ಭಾವನೆಗಳಿಗೆ ಯಾವುದೇ ರೀತಿಯ ವ್ಯಕ್ತವನ್ನು ಮಾಡಲಿಲ್ಲ. ಅದು ಅವರ ದೊಡ್ಡ ಸ್ತಿಕೆಯನ್ನು ತೋರಿಸುತ್ತದೆ ಎಂದು ಹೇಳಿ ತಿಳಿದುಕೊಂಡಿದ್ದೇನೆ. ಇವೊತ್ತು ನಿಜವಾಗಿಯೂ ಮಹಿಳೆಯಾಗಿ ಅವರು ರಾಜ್ಯಪಾಲರಾಗಿ ಇನ್ನೂ ಮುಂದುವರೆದಿದ್ದರೆ ಬಹಳ ಚೆನ್ನಾಗಿರುತ್ತಿತ್ತೇನೋ ಎಂಬುದು ನನ್ನ ವೈಯಕ್ತಿಕ ಭಾವನೆ. ಅದೇನೇ ಆಗಲಿ ಇವೊತ್ತು ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆ, ಒಬ್ಬ ಸಮರ್ಥ, ದಕ್ಷ, ಪ್ರಾಮಾಣಿಕ ಅಧಿಕಾರಿಯನ್ನು ರಾಜ್ಯಸಭಾ ಸದಸ್ಯರಾಗಿದ್ದವರನ್ನು ಇಲ್ಲಿ ತಂದು ಶ್ರೀ ಚತುರ್ವೇದಿ ಎನ್ನುವವರನ್ನು ರಾಜ್ಯಪಾಲರನ್ನಾಗಿ ಮಾಡಿದ್ದಾರೆ. ಇವರನ್ನು ಸ್ವಾಗತ ಮಾಡಿ, ಅವರಿಗೆ ಬೀಳ್ಕೊಡತಕ್ಕಂಥ ಈ ವಿಶೇಷ ಪ್ರಸ್ತಾವನೆಯನ್ನು ನಮ್ಮ ಪಕ್ಷದ ವತಿಯಿಂದ ಸಂಯುಕ್ತ ಜನತಾ ದಳದ ವತಿಯಿಂದ ಮತ್ತು ಜನತಾ ಪರಿವಾರದಿಂದ ಬೆಂಬಲಿಸಿ, ಶ್ರೀ ಚತುರ್ವೇದಿಯವರಿಗೆ ಮತ್ತೊಮ್ಮೆ ನಾನು ಸ್ವಾಗತವನ್ನು ಮಾಡಿ ಶ್ರೀಮತಿ ರಮಾದೇವಿಯವರ ನಿವೃತ್ತಿಯ ಜೀವನ ಸುಖಮಯವಾಗಿರಲಿ, ಅವರಿಗೆ ಭಗವಂತ ಎಲ್ಲಾ ರೀತಿಯ ಒಳ್ಳೆಯದನ್ನು ಮಾಡಲಿ ಎಂದು ಹೇಳಿ ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ. ಚಿನ್ನಿಗಪ್ಪ (ಕೊರಟಗೆರೆ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಘನತೆವೆತ್ತ ಹದಿಮೂರನೇ ರಾಜ್ಯಪಾಲರಾಗಿ ಚಿರಸ್ಮರಣೀಯವಾಗಿ ಸೇವೆ ಸಲ್ಲಿಸಿ ಸಾಮಾನ್ಯ ಜನರಲ್ಲಿ ಬೆರೆತು ಜನತೆಯ ಅಶೋತ್ತರಗಳಿಗೆ ಸ್ಪಂದಿಸಿ ಕೆಲಸ ಮಾಡಿದಂಥ ಶ್ರೀಮತಿ ವಿ.ಎಸ್. ರಮಾದೇವಿಯವರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದು ಕನ್ನಡದಲ್ಲಿಯೇ ಅವರ ರಾಜಕೀಯ ಭಾಷಣವನ್ನು ಇಲ್ಲಿ ಏನು ಉಭಯ ಸದನದ ಅಧಿವೇಶನದಲ್ಲಿ ಮಾಡಿದ್ದರು ಅದು ಸ್ಮರಣೀಯವಾದುದು. ಹಿಂದೆ ರಾಜ್ಯಪಾಲರಾಗಿದ್ದಂಥ ಶ್ರೀ ಜಯಚಾಮರಾಜ ಒಡೆಯರ್ ತಮ್ಮ ಕನ್ನಡದಲ್ಲಿಯೇ ಕನ್ನಡದ ಒಂದು ಸಂಸ್ಕೃತಿ ಮತ್ತು ಪರಂಪರೆಗೆ ತನ್ನದೇ ಆದಂಥ ಒಂದು ಮೆರಗನ್ನು ಕೊಟ್ಟಂಥ ರಾಜ್ಯಪಾಲರಾಗಿದ್ದು, ಅದರ ಉದಾಹರಣೆಯಾಗಿ ಇವರೂ ಕೂಡ ಅಮೃತ್ತಮವಾಗಿ

ಕನ್ನಡದಲ್ಲಿಯೇ ಭಾಷಣ ಮಾಡಿ ಸಾಮಾನ್ಯ ಜನರಿಗೆ ಅರ್ಥವಾಗುವಂಥ ರೀತಿಯಲ್ಲಿ ಭಾಷಣವನ್ನು ಅವರು ಮಾಡಿ ರಾಜ್ಯಪಾಲರಾಗಿ ಅತ್ಯುತ್ತಮವಾಗಿ ಸ್ಮರಣೀಯವಾದ ಕೆಲಸ ಮಾಡಿದಂಥ ಅವರಿಗೆ, ನಾನು ನಮ್ಮ ಜನತಾ ದಳ ಪರಿವಾರ ಹಾಗೂ ಜಾತ್ಯಾತೀತ ಜನತಾ ದಳದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಾ ಏನಿವತ್ತು ಕೇಂದ್ರ ಸರ್ಕಾರ ಟಿ.ಎನ್. ಚತುರ್ವೇದಿಯವರನ್ನು ಈ ರಾಜ್ಯದ ರಾಜ್ಯಪಾಲರನ್ನಾಗಿ ಹೊಸದಾಗಿ ನೇಮಕ ಮಾಡಿದ್ದಾರೆ ಅವರ ಸೇವೆ ಈ ರಾಜ್ಯಕ್ಕೆ ಅತ್ಯುತ್ತಮವಾಗಲಿ ಎಂದು ಹೇಳಿ ಪರಮಾತ್ಮನಲ್ಲಿ ಪ್ರಾರ್ಥನೆ ಮಾಡಿ ಅವರನ್ನು ಸ್ವಾಗತ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸದನದ ನಾಯಕರು ಮಂಡಿಸಿರತಕ್ಕಂಥ ಈ ಒಂದು ಠರಾವಿನ ಬಗ್ಗೆ ನನ್ನ ಸಂಪೂರ್ಣವಾದ ಸಹಮತವನ್ನು ವ್ಯಕ್ತ ಮಾಡುತ್ತಾ ಕಳೆದ ಎರಡು ವರ್ಷಗಳಿಗೂ ಮಿಕ್ಕಿ ಸಂಸದೀಯ ವ್ಯವಹಾರಗಳ ಸಚಿವನಾಗಿ ತೀರಾ ಹತ್ತಿರದಿಂದ ರಾಜ್ಯಪಾಲರ ಸಂಪರ್ಕ ಇರಬೇಕಾಗುತ್ತದೆ. ಅನೇಕ ಶಾಸನ ರಚನೆಗಳಲ್ಲಿ, ಶಾಸನ ಸಭೆಯನ್ನು ಕರೆಯುವುದರಲ್ಲಿ, ಶಾಸನ ಸಭೆಯನ್ನು ನಿರಶನಗೊಳಿಸುವುದರಲ್ಲಿ ಮತ್ತು ಸಂವಿಧಾನದ ತೊಡಕುಗಳು ಬಂದಾಗ ಸಲಹೆ ಮಾರ್ಗದರ್ಶನ ಪಡೆಯುವುದರಲ್ಲಿ ರಾಜ್ಯಪಾಲರ ಜೊತೆ ವಿಶೇಷವಾದಂಥ ಒಂದು ಸಂದರ್ಭವನ್ನು ಸಂಸದೀಯ ವ್ಯವಹಾರಗಳ ಸಚಿವರಿಗೆ ಒದಗಿಸಿ ಕೊಡುತ್ತದೆ. ಕೇಂದ್ರದ ಕಾನೂನು ಇಲಾಖೆಯಲ್ಲಿ ಅವರು ಶಾಸಕಾಂಗ ರಚನೆ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಅವರು ಶಾಸಕಾಂಗ ರಚನೆ ವಿಭಾಗ ಅಂದ ತಕ್ಷಣವೇ ನಾವು ಮಾಡತಕ್ಕಂಥ ಶಾಸನಗಳನ್ನು ಪ್ರತಿಯೊಂದು ಶಾಸನದಲ್ಲೂ, ಈ ಫೈನಾನ್ಸ್ ಬಿಲ್ಸ್ ಹೋಗಿ ಅವರಿಂದ ಮಂಜೂರಾಗಿ ಬರಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ನಮಗೆ ಸ್ವಲ್ಪ ಮುಜುಗರವಾಗುತ್ತಿತ್ತು. ಏಕೆಂದರೆ ಅವರಿಗೆ ಇರತಕ್ಕಂಥ ವಿಶೇಷವಾದ ಅನುಭವ, ನಾವು ಎಲ್ಲಾದರೂ ಒಂದು ಶಬ್ದ ತಪ್ಪು ಮಾಡಿದ್ದರೂ ಅವರ ಗಮನಕ್ಕೆ ಬರುತ್ತದೆ ಅನ್ನುವಂಥದ್ದು ನಮಗೆ ಎಚ್ಚರಿಕೆ ವಹಿಸುವುದಕ್ಕೆ ಒಂದು ಸದವಕಾಶವಾಯಿತು. ಈ ಸಂವಿಧಾನ ಹಾಗೂ ಶಾಸನಗಳ ಪ್ರಕ್ರಿಯೆಯಲ್ಲಿ ವಿಶೇಷ ಪರಿಣತಿ ಅವರಿಗೆ ಇದ್ದುದ್ದರಿಂದ ನಮ್ಮ ಕೆಲಸವೂ ಸುಲಭವಾಗುತ್ತಿತ್ತು ಎನ್ನತಕ್ಕಂಥದ್ದನ್ನು ನಾನು ಇಲ್ಲಿ ದಾಖಲಿಸುವುದಕ್ಕೋಸ್ಕರ ನಿಂತಿದ್ದೇನೆ. ಶ್ರೀಮತಿಯವರು ನಾವು ವಿಧಾನ ಮಂಡಲದಿಂದ ಏನನ್ನು ಮಂಜೂರು ಮಾಡಿಕಳುಹಿಸಿದ್ದೇವೋ ಅದು ಹೊತ್ತು ಗೊತ್ತಿಲ್ಲದೇ, ಸಮಯ ಸಂದರ್ಭಗಳನ್ನು ನಾವು ಅನುಸರಿಸಲು ಸಾಧ್ಯವಾಗದೇ ಇದ್ದರೂ ಕೂಡ ರಾಜ್ಯದ ಹಿತದೃಷ್ಟಿಯಿಂದ ಎಲ್ಲಾ ಕಾಲಕ್ಕೂ ನಾವು ರಚಿಸಿದಂಥ ಶಾಸನಗಳು,

10.50 ಎ.ಎಂ.

ಮತ್ತು ಸಂವಿಧಾನದ ಪ್ರಕ್ರಿಯೆಯಲ್ಲಿ ಅತ್ಯಂತ ನಿಕಟವಾಗಿ ರಾಜ್ಯದ ಜನಪರ ಕೆಲಸಗಳನ್ನು ಮಾಡಿಕೊಂಡು ಬಂದಿದ್ದರು. ಜೊತೆಗೆ ಬಹಳ ವಿಷೇಶವಾಗಿ ಪ್ರತಿಪಕ್ಷದ ನಾಯಕರು ಹೇಳಿದ ಹಾಗೆ ಸಂವಿಧಾನದ ಮುಖ್ಯಸ್ಥರಾಗಿದ್ದು ಸಾಮಾನ್ಯ ಜನರ ಸಂಪರ್ಕ ಸಾಧ್ಯವೇ ಇಲ್ಲವೆನ್ನುವಂತಹ ಸಂದರ್ಭದಲ್ಲಿ ತೀರಾ ನಿಕಟವಾಗಿ ಜನರ ಮಧ್ಯೆ ತಾವೂ ಒಬ್ಬರಾಗಿ ಓಡಾಡುತ್ತಿದ್ದುದನ್ನು ನಾವು ವಿಶೇಷವಾಗಿ ಕಂಡೆವು. ಅವರು ರಾಜ್ಯದಲ್ಲಿ ಕರೆದ ಕಡೆಯೆಲ್ಲಾ ಹೋಗಿದ್ದಾರೆ. ಹೋಗದೆ ಇರುವ ಜಾಗಗಳೇ ಇಲ್ಲವೆಂದು ಹೇಳಬಹುದು. ಇಷ್ಟೊಂದು ಆಸಕ್ತಿಯನ್ನು ಅವರು ಈ ರಾಜ್ಯದಲ್ಲಿ

ವಹಿಸಿದ್ದರು. ಶ್ರೀಮತಿ ಮೋಟಮ್ಮನವರ ಜೊತೆ ನಮ್ಮ ಮೂಡಿಗೆರೆಗೆ ಬಂದಾಗ ಅತ್ಯಂತ ಆನಂದದಿಂದ ಸವಿದಿದ್ದರು. ಅಂದರೆ ಭಾಷೆ ಇಲ್ಲದೆ ಇದ್ದರೂ ಸಂಸ್ಕಾರ ಸಂಸ್ಕೃತಿಗಳ ಒಂದು ಸಾಗರವಾದಂತಹ ಈ ದೇಶದಲ್ಲಿ ಎಲ್ಲರೂ ಒಂದು ಎನ್ನುವಂತಹ ಒಂದು ಭಾವನೆಯನ್ನು ನಮಗೆ ಕೊಟ್ಟಿದ್ದರು. ಆದುದರಿಂದ ವಿಶೇಷವಾಗಿ ನಾನು ಈ ಒಂದು ಸಂದರ್ಭದಲ್ಲಿ ಶ್ರೀಮತಿ ರಮಾದೇವಿಯವರ ಕಾರ್ಯವೈಖರಿ ಮತ್ತು ನಿಕಟ ಸಂಪರ್ಕ ಹೊಂದಿದ್ದರಿಂದ, ಅವರು ಮಾಡಿರತಕ್ಕಂಥ ಸೇವೆಯನ್ನು ಸ್ಮರಿಸಿಕೊಳ್ಳುವುದು ನನ್ನ ಕರ್ತವ್ಯವೆನ್ನುವಂತಹ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ. ಇನ್ನು ಮುಂದೆ ರಾಜ್ಯಪಾಲರಾಗಿ ಬರತಕ್ಕಂಥ ಶ್ರೀಮಾನ್ ಚತುರ್ವೇದಿ ಅವರು ರಾಜ್ಯಸಭಾ ಸದಸ್ಯರಾಗಿದ್ದಾರೆ. ಸಾಕಷ್ಟು ಅನುಭವಿಗಳು ಇದ್ದಾರೆ. ಬಹುಶಃ ಶ್ರೀಮತಿ ರಮಾದೇವಿಯವರ ಫುಟ್ ಸ್ಟೆಪ್ ಅನ್ನು ಅವರು ಫಾಲೋ ಮಾಡುತ್ತಾರೆ ಅಥವಾ ಅದಕ್ಕಿಂತ ಉತ್ತಮವಾದಂತಹ ಒಂದು ವ್ಯವಸ್ಥೆಯನ್ನು ಈ ಸಂವಿಧಾನದ ಮುಖ್ಯಸ್ಥರಾಗಿ ರಾಜ್ಯಕ್ಕೆ ಮತ್ತು ಕೇಂದ್ರದ ಮಧ್ಯೆ ಸಂಪರ್ಕ ಸೇತುವೆಯಾಗಿ ನಿಲ್ಲುತ್ತಾರೆ ಎಂಬ ಆಶಯವನ್ನು ವ್ಯಕ್ತ ಮಾಡಿ ನಾನೂ ಕೂಡ ನಮ್ಮ ನಾಯಕರು ಮತ್ತು ಪ್ರತಿಪಕ್ಷದ ಮುಖಂಡರು ಹೇಳಿದಂತಹ ಭಾವನೆಗಳನ್ನು ವ್ಯಕ್ತಪಡಿಸುತ್ತೇನೆ.

+ ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರಾದ ಶ್ರೀಮತಿ ರಮಾದೇವಿಯವರ ಬಗ್ಗೆ ನನಗಂತೂ ಬಹಳ ಹೆಮ್ಮೆ ಎನಿಸಿದೆ, ಆದರಲ್ಲೂ ಸಹ ನಮ್ಮ ಈ ರಾಜ್ಯದ ಹೆಣ್ಣುಮಕ್ಕಳು ಸಹ ಅವರ ಬಗ್ಗೆ ಹೆಮ್ಮೆ ಪಟ್ಟುಕೊಂಡಿದ್ದಾರೆ ಮತ್ತು ಅವರ ಕೆಲಸ ಕಾರ್ಯಗಳ ಬಗ್ಗೆ ಒಂದು ರೀತಿ ಸಂತೋಷ ಹಾಗೂ ಗೌರವವನ್ನು ಸಹ ಇಟ್ಟುಕೊಂಡಿದ್ದಾರೆ. ಹೆಣ್ಣುಮಕ್ಕಳಿಗೆ ಅವಕಾಶ ಕೊಟ್ಟರೆ ಎಂತಹ ಕೆಲಸವನ್ನು ಆದರೂ ಎಷ್ಟು ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ನಿರ್ವಹಿಸಬಲ್ಲರು ಎನ್ನುವುದಕ್ಕೆ ಶ್ರೀಮತಿ ರಮಾದೇವಿಯವರು ಉದಾಹರಣೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ರೀತಿ ಅವರದು ಮಾನವೀಯತೆಯ ಮೂರ್ತಿವೆತ್ತಂಥ ವ್ಯಕ್ತಿತ್ವ. ಅವರು ರಾಜ್ಯಪಾಲರಾಗಿ ಬಂದಾಗಲೇ ಮಹಿಳೆಯರ, ಮಕ್ಕಳ ಹಾಗೂ ಅಂಗವಿಕಲರ ಬಗ್ಗೆ ಹೆಚ್ಚು ಕೆಲಸ ಮಾಡುತ್ತೇನೆಂದೂ ಮನೆಯಲ್ಲಿ ಕೂರುವುದಿಲ್ಲವೆಂದು ಹೇಳಿದ್ದರು. ಅದನ್ನು ಅವರು ಕರ್ತವ್ಯದ ಮೂಲಕ ಸಾಬೀತು ಮಾಡಿದರು. ಯಾವುದೇ ಒಂದು ಅಂಗವಿಕಲರ ಕಾರ್ಯಕ್ರಮಕ್ಕೆ ಬಂದರೂ ಸಹ ಅವರು ಬಹಳ ಚೆನ್ನಾಗಿ ಸ್ಪಂದಿಸುತ್ತಿದ್ದರು. ಸ್ಥಳದಲ್ಲೇ ಅವರಿಗೆ ಸಹಾಯಧನ ಕೊಡುತ್ತಿದ್ದರು. ಆ ಕೆಲಸವನ್ನು ಇದುವರೆಗೆ ಯಾರೂ ಸಹ ಮಾಡಲಿಲ್ಲ ಎಂದು ನನಗೆ ಅನ್ನಿಸುತ್ತದೆ. ಹಾಗೆ ನನ್ನನ್ನೂ ಸಹ ಬಹಳಷ್ಟು ಬಾರಿ ಕರೆದು, ಹೆಣ್ಣುಮಕ್ಕಳ ಬಗ್ಗೆ ಯಾವರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಯಾವರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಾಡಿದರೆ ಅವರಿಗೆ ಹೆಚ್ಚು ಸಹಾಯವಾಗುತ್ತದೆಂದು ಹೇಳುತ್ತಿದ್ದರು. ಮೊನ್ನೆ ಮದ್ರಾಸ್‌ನಲ್ಲಿ ಫುಡ್‌ವರ್ಲ್ಡ್ ಇನ್ಸ್‌ಟಿಟ್ಯೂಟ್‌ನವರು ಹೆಣ್ಣುಮಕ್ಕಳಿಂದ ಕಾರ್ಪೆಂಟರಿ ಕೆಲಸ ಮಾಡಿಸಿದ್ದರು. ಅಲ್ಲಿ ಅವರುಗಳು ಬಹಳ ಚೆನ್ನಾಗಿ ಸಣ್ಣ ಮನೆಗಳಲ್ಲಿ ಈ ಒಂದು ಸಾಮಗ್ರಿಗಳನ್ನು ಎಂದರೆ ಸೇಫಾ ಸೆಟ್ ಇವುಗಳನ್ನು ಹೇಗೆ ಜೋಡಿಸಿಕೊಳ್ಳಬಹುದು ಮತ್ತು ಅವು ಹೇಗೆ ಉಪಯುಕ್ತ, ಹಾಗೂ ಅವುಗಳ ಮಾಡಲ್ ಮಾಡಿ ತಂದುಕೊಟ್ಟಾಗ ಸ್ವತಃ ಅವರೇ ಬಂದು ಇನಾಗರೇಟ್ ಮಾಡಿ, ಇದು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಈ ರಾಜ್ಯದಲ್ಲೂ ಕೂಡ ಹೆಣ್ಣುಮಕ್ಕಳಿಗೆ ಟ್ರೈನಿಂಗ್‌ಗೆ ನೀವು ಕಳುಹಿಸಬೇಕೆಂದು, ಹೆಣ್ಣುಮಕ್ಕಳೂ

ಸಹ ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯ, ಹಾಗೂ ನಮ್ಮ ಹೆಣ್ಣುಮಕ್ಕಳು ಫುಡ್ ವರ್ಲ್ಡ್‌ನಿಂದ ವುಡ್‌ವರ್ಲ್ಡ್‌ಗೆ ಪಾದಾರ್ಪಣೆ ಮಾಡಿರುವುದು ಬಹಳ ಹೆಮ್ಮೆ ಎಂದು ಹೇಳಿದರು. ಈ ರೀತಿಯಾಗಿ ನಮಗೆ ಅವರು ತಾಯಿಯಂತೆ ಹಾಗೂ ಸಹೋದರಿಯಂತೆ ಒಳ್ಳೆಯ ಮಾರ್ಗದರ್ಶನ ಮಾಡಿದರು. ನಮ್ಮ ಮುಂದೆ ಕುಳಿತಿರುವ ಬಿಜೆಪಿ ಸಹೋದರರು ಸ್ವಲ್ಪ ಮನಸ್ಸು ಮಾಡಿದ್ದರೆ ಅವರನ್ನು ಮುಂದುವರೆಸುವ ಪ್ರಯತ್ನ ಮಾಡಬಹುದಿತ್ತು ಏನೋ ಎಂದು ನಮಗೆ ಅನ್ನಿಸುತ್ತಿದೆ. ನಾವು ನಮಗೆ ಗೊತ್ತಿದ್ದ ಕೆಲವು ಸ್ನೇಹಿತರಿಗೆ ಧನಂಜಯ ಕುಮಾರ್ ಇರಬಹುದು, ಅನಂತ ಕುಮಾರ್ ಇರಬಹುದು ಅವರಿಗೆ ಮೇಡಂ ಅವರನ್ನು ಮತ್ತೊಂದು ಟರ್ಮ್‌ಗೆ ಮುಂದುವರೆಸಲಿಕ್ಕೆ ಸಹಾಯ ಮಾಡಿಯೆಂದು ಕೇಳಿಕೊಂಡಿದ್ದೆವು. ಆದರೆ ಅವರಿಗೆ ಎಷ್ಟರಮಟ್ಟಿಗೆ ಅಂತರಂಗ ಮುಟ್ಟಿತೋ ಗೊತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಅವರನ್ನು ಹೊಗಳುತ್ತಿದ್ದಾಗ ಅದನ್ನೇ ಹೇಳಬೇಕೆಂದು ಅನ್ನಿಸಿತು. ನೀವು ಅವರನ್ನು ಇಲ್ಲೇ ಉಳಿಸಿರಿ ಎಂದು ಯಾವತ್ತಾದರೂ ನಮ್ಮ ಪ್ರಧಾನ ಮಂತ್ರಿಯವರಿಗೆ ಹೇಳಿದ್ದರೋ ಏನೋ ಎಂದು. ಏನೇ ಆಗಲಿ ಬಹಳಷ್ಟು ಜನಸಾಮಾನ್ಯರು ರಾಜಭವನವನ್ನು ಇಣುಕಿ ನೋಡದವರೇ ಇಲ್ಲ. ಪ್ರತಿನಿತ್ಯ ಜನರ ಭೇಟಿ ಮಾಡುತ್ತಿದ್ದರು. ಅಲ್ಲಿ ಮಾನ್ಯ ರಾಜ್ಯಪಾಲರಿಗೆ ಮಾಡುವುದಕ್ಕೆ ಆಗದೆ ಇರುವುದನ್ನು ನೋಡಿಕೊಂಡು, ಮೇಟಮ್ಮನವರನ್ನು ಮೀಟ್ ಮಾಡಿ ಎಂದು ಅಸಹಾಯಕ ಹೆಣ್ಣು ಮಕ್ಕಳನ್ನು ಹಾಗೂ ಅಂಗವಿಕಲರನ್ನು ನನ್ನ ಕಡೆ ಡೈರೆಕ್ಟ್ ಮಾಡಿ ಒಂದು ಸ್ಲಿಪ್ ಕೊಟ್ಟು ಕಳುಹಿಸುತ್ತಿದ್ದರು. ಈ ಕೆಲಸವನ್ನು ಮುಂದೆ ಬರುವಂತಹ ರಾಜ್ಯಪಾಲರೂ ಸಹ ಮಾಡಿದರೆ ನಿಜವಾಗಲು ಜನಸಾಮಾನ್ಯರಿಗೆ ಬಹಳಷ್ಟು ಸಹಾಯ ಮಾಡುವುದಕ್ಕೆ ಸಾಧ್ಯ. ಹಾಗೂ ಈ ರಾಜ್ಯವನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಮುಂದೆ ಬರುವವರು ಆ ಕೆಲಸ ಮಾಡಲಿ ಎಂದು ನಾನು ಆಸೆ ಪಡುತ್ತೇನೆ. ಹಾಗೆಯೇ ಶ್ರೀಮತಿ ರಮಾದೇವಿಯವರೂ ಸಹ ಮುಂದಿನ ದಿನಗಳಲ್ಲಿ ಇಂತಹ ಅವಕಾಶ ಅವರಿಗೆ ಮತ್ತೆ ಸಿಕ್ಕಿ ಒಳ್ಳೆಯ ಸಮಾಜಗಳ ಕೆಲಸಗಳನ್ನು ಹಾಗೂ ಮಹಿಳೆಯರಿಗೆ, ಅಂಗವಿಕಲರಿಗೆ ಮಾಡಿಕೊಂಡು ಹೋಗಲಿ ಎಂದು ಹಾರೈಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಹುದ್ದೆ ಎಂದರೆ ನಮಗೆ ಕಲ್ಪನೆಗಳೇ ಬೇರೆ. ರಾಜಭವನ ಎಂದರೆ ಅದೊಂದು ದಂತಗೋಪುರ ಎಂದು ಭಾವಿಸಿದ್ದೆವು. ಪ್ರಥಮಬಾರಿಗೆ ಶ್ರೀಮತಿ ರಮಾದೇವಿಯವರು ನಮ್ಮ ರಾಜ್ಯಕ್ಕೆ ರಾಜ್ಯಪಾಲರಾಗಿ ಬಂದನಂತರ, ಅದು ದಂತಗೋಪುರ ಅಲ್ಲ, ಜನಸತ್ತೆಯ ಒಂದು ಕೇಂದ್ರ ಸ್ಥಾನವೆಂದು ಹೇಳುವಂತಾದ್ದನ್ನು ತೋರಿಸಿಕೊಟ್ಟರು. ಎಲ್ಲದಕ್ಕಿಂತ ಹೆಚ್ಚಾಗಿ ರಾಜ್ಯಪಾಲರ ಹುದ್ದೆಯನ್ನು ಜನಸಾಮಾನ್ಯರ ನಡುವೆ ಕೊಂಡೊಯ್ದಂತಹವರಲ್ಲಿ ಅವರು ಮೊದಲಿಗರು. ನಾವು ಆಯ್ಕೆ ಆಗಿ, ಹೊಸ ಸರ್ಕಾರ ಬಂದ ಪ್ರಥಮದಲ್ಲಿ ನಮ್ಮನ್ನೆಲ್ಲಾ ಬೆಳಗಿನ ಸಮಯದಲ್ಲಿ, ಟೀ-ಗೆ ಕರೆದಿದ್ದರು. ಆಹ್ವಾನ ಪತ್ರದಲ್ಲಿ ನಿಮ್ಮ ಪತ್ನಿಯರನ್ನು ಕೂಡ ಕರೆತರಬೇಕೆಂದು ಮುದ್ರಿಸಿದ್ದರು. ನಾವು ಅನೇಕರು ಹಾಗೆ ಹೋದಾಗ ಅವರು ಬಂದು, ನೀವೇಕೆ ಒಬ್ಬರೇ ಬಂದಿರಿ ಎಂದು ಕೇಳಿದರು. ನಾವು ಟೀಗೆ ಹೋದಾಗ, ಅವರು ರಾಜ್ಯಪಾಲರು ಎಂದು ಅನಿಸಲಿಲ್ಲ. ಒಬ್ಬ ಸದ್ಗೃಹಿಣಿ ಆಗಿ ನಮ್ಮನ್ನು ವೈಯಕ್ತಿಕವಾಗಿ ಉಪಚಾರ ಮಾಡಿದ ರೀತಿಯನ್ನು ನೋಡಿದಾಗ ಅವರು ಅಂತಹ ಹುದ್ದೆಯಲ್ಲಿ ಇದ್ದರೂ ಕೂಡ ಗೃಹಿಣಿತನವನ್ನು ಎಷ್ಟರಮಟ್ಟಿಗೆ

ಮೈಗೂಡಿಸಿಕೊಂಡಿದ್ದರು ಎನ್ನುವುದು ನಮಗೆ ಗೊತ್ತಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಾನು ಎಂಟು ವರ್ಷದಿಂದ ಇಲ್ಲಿ ಶಾಸಕನಾಗಿ ಇದ್ದೇನೆ. ಶಾಸನ ಸಭೆಯ ಜಂಟಿ ಅಧಿವೇಶನದ ರಾಜ್ಯಪಾಲರ ಭಾಷಣ ಎಂದರೆ ನಮಗೆ ಮನರಂಜನೆಯ ತಾಣ. ಇಲ್ಲಿ ಎಲ್ಲೋ ಒಂದು ಕಡೆ ಜಾಗಟೆ ಬಡಿಯುತ್ತಿದ್ದರು. ಹಿಂದುಗಡೆಯಿಂದ ಸ್ವಲ್ಪ ಜನ ಎದ್ದು ಕೇಕೆ ಹಾಕುತ್ತಿದ್ದರು. ಹೀಗೆ ಆಗುತ್ತಿತ್ತು ಇದರ ನಡುವೆ ರಾಜ್ಯಪಾಲರು ಭಾಷಣ ಓದುತ್ತಿದ್ದರು. ಪ್ರಥಮ ಬಾರಿಗೆ ಶ್ರೀಮತಿ ರಮಾದೇವಿಯವರು ಬಂದ ನಂತರ ಈ ಸದನದಲ್ಲಿ ರಾಜ್ಯಪಾಲರ ಭಾಷಣವನ್ನು ಎಲ್ಲರೂ ಕುಳಿತು, ಸಂಪೂರ್ಣವಾಗಿ ಶಬ್ದ ಶಬ್ದವನ್ನು ಆಲಿಸುವಂತಹ ಒಂದು ಹೊಸ ವಾತಾವರಣ ನಿರ್ಮಾಣವಾಯಿತು. ಅವರು ಬೇರೆ ಭಾಷಿಗರಾಗಿದ್ದರೂ ಸಹ ಕನ್ನಡದಲ್ಲಿ ಸಂಪೂರ್ಣವಾಗಿ, ಬೇರೆ ಭಾಷೆಯನ್ನು ಒಂದು ಶಬ್ದವನ್ನು ಉಪಯೋಗಿಸದೆ ಕನ್ನಡದಲ್ಲಿ ಅಷ್ಟೊಂದು ಅಪ್ಪಟವಾಗಿ ಮಾತನಾಡುವುದನ್ನು ನೋಡಿದರೆ ನಮಗೆಲ್ಲರಿಗೂ ರೋಮಾಂಚನ ಹಾಗೂ ಅಭಿಮಾನವಾಗುವಂತಹ ರೀತಿಯಲ್ಲಿ ಹೇಳುತ್ತಿದ್ದರು. ಇತ್ತೀಚೆಗೆ ಒಂದು ಸಮಾರಂಭದಲ್ಲಿ ಶ್ರೀಮತಿ ಮೋಟಮ್ಮನವರ ಜೊತೆ ಭಾಗವಹಿಸಿದಂತಹ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಒಂದು ಸುದ್ದಿ ಪ್ರಕಟವಾಯಿತು. ಅವರು ಹೆಣ್ಣಿನ ಬದುಕಿನ ಬಗ್ಗೆ ಎಷ್ಟೊಂದು ಆತಂಕಿತರಾಗಿದ್ದರು ಎಂದು ಈ ಶಬ್ದದಲ್ಲಿ ನಾವು ನೋಡಬಹುದು. ಅವರು, ಹೇಳಿದರು ನಿನ್ನೆ ಬೆಳಿಗ್ಗೆ ನನ್ನ ಮನೆಯಲ್ಲಿ ನಮ್ಮ ಕೆಲಸದವರು ಬಹಳ ಹೆಮ್ಮೆಯಿಂದ, ಸಡಗರದಿಂದ, ಹೇಳಿದರು. ನಮ್ಮ ಹೆಣ್ಣು ಕರು ಹಾಕಿದೆಯೆಂದು ಅತ್ಯಂತ ಸಂಭ್ರಮವಾಯಿತು. ಹೆಮ್ಮೆಯಿಂದ ಹೇಳಿದರು. ಅದೇ ರೀತಿ ಒಬ್ಬರ ಮನೆಯಲ್ಲಿ ಹೆಣ್ಣುಮಗಳು ಹುಟ್ಟಿದರೆ ಆ ಸಂಭ್ರಮ ಸಡಗರ ಬರುವುದಿಲ್ಲ. ಕನಿಷ್ಟ ಇಷ್ಟಾದರೂ ನಮ್ಮ ಹೆಣ್ಣುಮಗಳಿಗೆ ಬರಬೇಕು, ಆ ಪ್ರಾಣಿ ಹೆಣ್ಣು ಕರು ಹಾಕಿದರೆ ಅದಕ್ಕೆ ಬರತಕ್ಕಂಥ ಸಂತೋಷ, ಸಡಗರ ನಮ್ಮ ಮನೆಯಲ್ಲಿ ಹೆಣ್ಣು ಹೆತ್ತರೆ ಬರುವುದಿಲ್ಲವೆಂದು ಹೇಳಿದಾಗ, ಹೆಣ್ಣಿನ ಹುಟ್ಟಿನ ಬಗ್ಗೆ, ಹೆಣ್ಣಿನ ಬಗ್ಗೆ ನಮಗೆ ಇರತಕ್ಕಂಥ ಕೀಳು ಭಾವನೆ ಎಷ್ಟರಮಟ್ಟಿನದು ಎಂದು ರಾಜ್ಯಪಾಲರಾಗಿ ಹೇಳಿರತಕ್ಕಂಥ ರೀತಿ ನಮಗೆಲ್ಲರಿಗೂ ಮನೋಜ್ಞವಾಗತಕ್ಕಂಥ ಸಂಗತಿ ಎಂದು ನಾನು ಭಾವಿಸುತ್ತೇನೆ. ಐದು ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ರಾಜ್ಯಪಾಲರಾಗಿ ಹೇಗೆ ಇರಬೇಕೆಂದು ಅವರು ತೋರಿಸಿಕೊಟ್ಟಿದ್ದಾರೆ. ಅವರ ಮುಂದಿನ ಬದುಕು ಆಯುಷ್ಯ, ಆರೋಗ್ಯವನ್ನು ದೇವರು ಕೊಡಲಿ ಎಂದು ಹೇಳುತ್ತಾ, ಅವರು ತಮ್ಮ ಸೇವೆಯನ್ನು ಕರ್ನಾಟಕ ರಾಜ್ಯದ ಜನ ಯಾವತ್ತಿಗೂ ನೆನಪು ಮಾಡಿಕೊಳ್ಳುವ ಹಾಗೆ ಮಾಡಿದ್ದಾರೆಂದು ಹೇಳುತ್ತಾ, ಶ್ರೀಮಾನ್ ಚತುರ್ವೇದಿ ಅವರೂ ಸಹ ಬಹಳ ಒಳ್ಳೆಯ ಅಧಿಕಾರಿಯಾಗಿ ನಮ್ಮ ಚೀಫ್ ಅಕೌಂಟೆಂಟ್ ಜನರಲ್ ಆಗಿ ಈ ದೇಶಕ್ಕೆ ಒಳ್ಳೆಯ ಸೇವೆಯನ್ನು ಸಲ್ಲಿಸಿರತಕ್ಕಂಥ ವ್ಯಕ್ತಿಯನ್ನು ನಮ್ಮ ಮುಂದಿನ ರಾಜ್ಯಪಾಲರನ್ನಾಗಿ ನೇಮಿಸಿದ್ದಾರೆ. ಅವರಿಂದಲೂ ಕೂಡ ಕರ್ನಾಟಕ ರಾಜ್ಯ ಒಳ್ಳೆಯ ಸೇವೆಯನ್ನು ಬಯಸುತ್ತದೆ. ಅಂತಹ ಒಳ್ಳೆಯ ಸೇವೆ ಅವರ ಸೇವಾವಧಿಯಲ್ಲಿ ದೊರಕುತ್ತದೆಂಬ ಭಾವನೆಯನ್ನು ವ್ಯಕ್ತಮಾಡುತ್ತಾ ಅವರಿಗೆ ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ಶ್ರೀಮತಿ ರಮಾದೇವಿಯವರನ್ನು ಸಹ ವೈಯಕ್ತಿಕವಾಗಿ ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸನಗೌಡ) : ಮಾನ್ಯ ಅಧ್ಯಕ್ಷರೆ, ಶ್ರೀಮತಿ ರಮಾದೇವಿಯವರು ರಾಜ್ಯಪಾಲರಾಗಿ ಕರ್ನಾಟಕದಲ್ಲಿ ಒಳ್ಳೆಯ ಹೆಸರು ಪಡೆದಿದ್ದಂಥ ವ್ಯಕ್ತಿಯಾಗಿದ್ದರು. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ವಿಷಯ ತರುವುದಕ್ಕೆ ನನಗೆ

ಬಹಳ ಸಂತೋಷವಾಗುತ್ತಿದೆ. ಏನೆಂದರೆ, ಶ್ರೀಮತಿ ರಮಾದೇವಿಯವರು ಸಾಮಾನ್ಯವಾಗಿ ಅನೇಕ ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು. ಒಂದು ಸಲ ನನ್ನ ಮತಕ್ಷೇತ್ರವಾದ ಬಸವನಗುಡಿಯಲ್ಲಿನ ಕೊಳಚೆಪ್ರದೇಶಕ್ಕೆ ಬರಬೇಕೆಂದು ಅವರನ್ನು ಕೇಳಿಕೊಂಡೆವು. ಆಗ ನಾವು ಯಾವ ಸ್ಥಳಕ್ಕೆ ಬರಬೇಕೆಂಬುದಕ್ಕೆ ಒಂದು ಲೆಟರ್ ಕೊಡಿ ಎಂದು ಕೇಳಿದರು. ಅದೇ ತರಹ ಆರ್.ಕೆ.ಮಠ್ ಸ್ಲಮ್ ಎಂದು ಒಂದು ಲೆಟರ್ ಕೊಟ್ಟು ಇಂತಹ ಸ್ಥಳದಲ್ಲಿ ಇಂತಹ ಕಡೆ ಇದೆಯೆಂದು ಹೇಳಿದೆವು. ಬಹುಶಃ ಅವರ ಅಧಿಕಾರಿಗಳು ಅದಕ್ಕೆ ವಿರೋಧ ವ್ಯಕ್ತಪಡಿಸಿದರು. ಕಾರಣ, ಸ್ಲಮ್‌ನಲ್ಲಿ ಸೆಕ್ಯೂರಿಟಿ ಇರುವುದಿಲ್ಲವೆಂದು. ಆದಾಗ್ಯೂ ಕೂಡ ಶ್ರೀಮತಿ ರಮಾದೇವಿಯವರು ಅಧಿಕಾರಿಗಳ ವಿರೋಧವಿದ್ದರೂ ಕೂಡ ಸ್ಲಮ್‌ಗೆ ಹೋಗಲೇಬೇಕೆಂದು ತೀರ್ಮಾನಿಸಿ ನನಗೆ ಒಂದು ಪತ್ರ ಬರೆದರು. ನಾನು ಸ್ಥಳಕ್ಕೆ ಬರಲು ಒಪ್ಪಿದ್ದೇನೆ, ನೀವು ನಮ್ಮ ಅಧಿಕಾರಿಗಳಿಗೆ ಸ್ಥಳವನ್ನು ತೋರಿಸಬೇಕೆಂದು ತಿಳಿಸಿದರು. ಅದೇ ರೀತಿ ಅವರು. ಆರ್ಯಕೆಮಠ್ ಸ್ಲಮ್‌ಗೆ ಬಂದಾಗ ಜೊತೆಗೆ ಬಿಡಿಎ ಕಮೀಷನರ್ ಆದ ಜಯಕರ್ ಜರೋಮೆ ಮತ್ತು ಮತ್ತೊಬ್ಬ ಕಮೀಷನರ್ ರವರೂ ಕೂಡ ಬಂದು ಭಾಗವಹಿಸಿದಾಗ ಅವರು ಬಡ ಮಕ್ಕಳಿಗೆ ಪುಸ್ತಕ ಮತ್ತು ಬಟ್ಟೆಗಳನ್ನು ವಿತರಿಸಿ ಸುಮಾರು ಒಂದು ಗಂಟೆಗಳ ಕಾಲ ಸಮಾರಂಭದಲ್ಲಿದ್ದು ಸ್ಲಮ್‌ನಲ್ಲಿರುವವರು ಪರಿವರ್ತನೆಗೊಳ್ಳಬೇಕೆಂದು ಅವರಿಗೆ ತಿಳಿ ಹೇಳಿದರು. ಅವರು ಒಂದು ಒಳ್ಳೆಯ ಅವಧಿಯನ್ನು ಮುಗಿಸಿದ್ದಾರೆ. ಅವರಿಗೂ ಹಾಗೂ ಹೊಸ ರಾಜ್ಯಪಾಲರಾಗಿ ಬರುತ್ತಿರುವವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ಶಿವಾಜಿನಗರ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯಪಾಲರಾದ ಶ್ರೀಮತಿ ವಿ.ಎಸ್. ರಮಾದೇವಿಯವರು ಕರ್ನಾಟಕದ ರಾಜ್ಯಪಾಲರಾದ ಕೂಡಲೇ ಅವರು ಮೊಟ್ಟಮೊದಲನೆಯದಾಗಿ ಮಾಡಿದ ಕೆಲಸ ಕನ್ನಡವನ್ನು ಬರೆದು, ಕಲಿತು, ಕನ್ನಡದಲ್ಲೇ ಇಡೀ ಸದನದಲ್ಲಿ ರಾಜ್ಯಪಾಲರ ಭಾಷಣವನ್ನು ಒಂದು ಚೂರೂ ಕೂಡ ತಪ್ಪಿಲ್ಲದೆ ಹೇಳಿದ್ದು ತುಂಬಾ ಸಂತಸ ತರುವ ಸಂಗತಿ. ಇಷ್ಟು ವರ್ಷಗಳಾದರೂ ಕೂಡ ಅನೇಕ ಜನರು ಇವೊತ್ತು ಬೆಂಗಳೂರಿನಲ್ಲಿ ಕನ್ನಡ ಬಾರದಿರುವ ಬಹಳಷ್ಟು ಜನರಿದ್ದಾರೆ. ಆದರೆ, ಇವರು ರಾಜ್ಯಪಾಲರಾಗಿ ಅತ್ಯಂತ ಒಳ್ಳೆಯ ರೀತಿಯಲ್ಲಿ ನಡೆದುಕೊಂಡಿದ್ದು, ಆಚರಣೆಗೆ ತಂದಿದ್ದು ಬೇರೆಯವರಿಗೆ ಅನುಕರಣೀಯ. ಇತ್ತೀಚೆಗೆ ಅವರು ಬಂಜಾರ ಜನಾಂಗದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರು. ರಾಜ್ಯಪಾಲರಾಗಿದ್ದ ಅವರು ಬಂಜಾರ ಜನಾಂಗದವರು ತೊಡುವ ಉಡುಪನ್ನು ಧರಿಸಿ ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸುತ್ತಿದ್ದುದನ್ನು ನೋಡಿದಾಗ ಬಂಜಾರ ಸಮಾಜದ ಸಾಮಾನ್ಯ ಮಹಿಳೆಯಂತಿದ್ದರು. ಆ ಉಡುಪಿನಲ್ಲಿ ಅವರನ್ನು ನೋಡಿದಾಗ ನಿಜವಾಗಿಯೂ ಕೂಡ ರಾಜ್ಯಪಾಲರು ಯಾವ ರೀತಿ ಇರಬೇಕೆಂದು ನಮಗನ್ನಿಸಿತು. ಮಾನ್ಯ ಸಚಿವರಾದ ಶ್ರೀಮತಿ ಮೋಟಮ್ಮನವರು ಹೇಳಿದಂತೆ, ಮಹಿಳೆಯರಿಗೆ ಒಳ್ಳೆಯ ಸ್ಥಾನಮಾನ ಸಿಕ್ಕಿದರೆ ಅವರೂ ಕೂಡ ಯಶಸ್ವಿಯಾಗಿ ಕೆಲಸ ಮಾಡಲು ಸಮರ್ಥರು ಎಂದು ಹೇಳಿರುವುದಕ್ಕೆ ನಿಜವಾಗಿಯೂ **ನಾನೂ ಸಹ ದನಿಗೂಡಿಸುತ್ತೇನೆ. ಅಂದಿನ ಕಾರ್ಯಕ್ರಮದಲ್ಲಿ ರಾಜ್ಯಪಾಲರಾದಿಯಾಗಿ ಶ್ರೀಮತಿ ಮೋಟಮ್ಮ ಹಾಗೂ ಶ್ರೀಮತಿ ರಾಣಿ ಸತೀಶ್‌ರವರು** ಒಳ್ಳೆಯ ಬಂಜಾರ ಉಡುಪಿನಲ್ಲಿದ್ದರು. ಇವೊತ್ತು ಕೂಡ ಅವರು ಅದೇ ಉಡುಪಿನಲ್ಲಿ ಬಂದಿದ್ದರೆ ಬಹಳ ಸಂತೋಷವಾಗುತ್ತಿತ್ತು. ಅವರು ರಾಜ್ಯದ ಮೂಲೆಮೂಲೆಗಳಿಗೂ ಹೋಗಿ ಒಳ್ಳೆಯ ಸಮಾಜ ಸೇವಕರು ಹಾಗೂ

ಯಾವುದೇ ಸಂಘ-ಸಂಸ್ಥೆಗಳು ಕರೆದಂಥ ಸಂದರ್ಭದಲ್ಲಿ ಭದ್ರತೆಯನ್ನು ಲೆಕ್ಕಿಸದೆ ಹೋಗಿ ಪಾಲ್ಗೊಂಡಿದ್ದು ಅವರ ಕಾರ್ಯವೈಖರಿಯನ್ನು ಮೆಚ್ಚತಕ್ಕದ್ದಾಗಿದೆ. ಅಂತಹವರು ರಾಜ್ಯಪಾಲರಾಗಿ ಮಹಿಳೆಯರಿಗೆ ಒಂದು ಮಾದರಿಯಾಗಿ ನಡೆದುಕೊಂಡಿರುವುದು ನಮಗೆ ಸಂತಸ ತರುವ ಸಂಗತಿಯಾಗಿದೆ. ಅವರಿಗೆ ನಾನು ವೈಯಕ್ತಿಕವಾಗಿ ಹಾಗೂ ನಮ್ಮ ಪಕ್ಷದ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ರೀತಿ ಹೊಸ ರಾಜ್ಯಪಾಲರಾಗಿ ನೇಮಕಗೊಂಡಿರುವ ಶ್ರೀಮಾನ್ ಚತುರ್ವೇದಿಯವರು ಅತ್ಯಂತ ಸರಳ ಜೀವಿ, ಸಾಮಾನ್ಯ ವ್ಯಕ್ತಿಯಾಗಿದ್ದಾರೆ. ಅವರು ಅತ್ಯಂತ ಯಶಸ್ವಿಯಾಗಿ ತಮ್ಮ ಜವಾಬ್ದಾರಿ ನಿರ್ವಹಿಸಿರುವವರು. ಇವೊತ್ತು ಅವರು ರಾಜ್ಯದ ರಾಜ್ಯಪಾಲರಾಗಿರುವ ಸಂದರ್ಭ ನೋಡಿದರೆ ದೆಹಲಿಯ ಒಂದು ಚಿಕ್ಕ ಕೊಠಡಿಯಲ್ಲಿ ವಾಸಿಸುತ್ತಿದ್ದಾರೆ. ಅತ್ಯುನ್ನತ ವಿದ್ಯಾಭ್ಯಾಸ ಮಾಡಿರುವ ಅಂತಹ ಸರಳ, ಅನುಭವವಿರುವ ವ್ಯಕ್ತಿಯನ್ನು ಇವೊತ್ತು ಕರ್ನಾಟಕ ರಾಜ್ಯದ ರಾಜ್ಯಪಾಲರನ್ನಾಗಿ ನೇಮಿಸಿರುವುದು ತುಂಬಾ ಸಂತೋಷದ ಸಂಗತಿ. ಅವರಿಗೂ ಕೂಡ ಹೃತ್ಪೂರ್ವಕ ಸ್ವಾಗತ ಕೋರುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕೊನೆಯದಾಗಿ, ನನಗೂ ಒಂದೆರಡು ಮಾತನಾಡಬೇಕೆಂದು ಅನ್ನಿಸುತ್ತಿದೆ. ಈಗಾಗಲೇ ಮಾನ್ಯ ಸದಸ್ಯರುಗಳು ಏನೇನು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೋ ಅದನ್ನು ಸಮರ್ಥಿಸುತ್ತಾ, ಮಹಿಳೆಯರಿಗೆ ಯಾವುದಾದರೂ ಅಧಿಕಾರ ಸಿಕ್ಕಿದಾಗ ಯಾವ ರೀತಿ ಅವರುಕಾರ್ಯನಿರ್ವಹಿಸುತ್ತಾರೆಂಬುದನ್ನು ಸಚಿವರಾದ ಶ್ರೀಮತಿ ಮೋಟಮ್ಮನವರು ಹೇಳಿರುವುದನ್ನು ನಾನು ಎತ್ತಿಹಿಡಿಯುತ್ತೇನೆ. ಶ್ರೀಮತಿ ರಮಾದೇವಿಯವರು ಯಾವುದೇ ಕಾಲದಲ್ಲಾಗಲಿ, ಸಂಸದೀಯ ವ್ಯವಹಾರಗಳಲ್ಲಾಗಲಿ ಅಥವಾ ಶಾಸಕಾಂಗದ ವ್ಯವಹಾರಗಳಲ್ಲಿ ಕೈಹಾಕಿದವರಲ್ಲ, ಜೊತೆಗೆ ಎರಡು ವಿಷಯಗಳನ್ನು ಪ್ರಸ್ತಾಪಿಸುವುದನ್ನು ಮಾನ್ಯ ಸದಸ್ಯರು ಮರೆತರು. ಬಹುಶಃ ಇವೊತ್ತು ರಾಜಭವನ ಇಷ್ಟು ಪ್ರಖ್ಯಾತಿಯಾಗಬೇಕಾದರೆ ಉದ್ಯಾನವನ, ಗ್ಲಾಸ್ ಹೌಸ್, ರಾಜಭವನದ ಒಳಗಿರುವ ಚಿತ್ರಕಲೆಗಳು ಏನಿವೆ, ಬಹುಶಃ ರಮಾದೇವಿಯವರು ನಿವೃತ್ತರಾಗಿ ಹೋಗಿರಬಹುದು ಅಥವಾ ಹೋಗಬಹುದು. ಆದರೆ, ಆ ಚಿತ್ರಗಳು ಹಾಗೂ ಉದ್ಯಾನವನದಲ್ಲಿರುವ ಒಂದೊಂದು ಗಿಡ, ಅಲ್ಲದೆ ಗ್ಲಾಸ್ ಹೌಸ್ ಆಗಲಿ ಅವರ ಹೆಸರನ್ನು ಎತಿ ಹೇಳುತ್ತದೆಂದು ನಾನೂ ಸಹ ಅತೀ ಸಮ್ರತೆಯಿಂದ ಬೀಳ್ಕೊಡುಗೆ ಕೊಡಬೇಕಾಗಿದೆ. ಅವರು ಹಾಗೂ ನಾನೂ ಯಾವಾಗಲೂ ತೆಲುಗು ಭಾಷೆಯಲ್ಲಿಯೇ ಮಾತನಾಡುತ್ತಿದ್ದೆವು. ಅವರೊಂದಿಗೆ ಇಂಗ್ಲೀಷ್ ಭಾಷೆ ಮಾತನಾಡಿಲ್ಲ, ಯಾವತ್ತೂ ತೆಲುಗು ಭಾಷೆಯನ್ನೇ ಮಾತನಾಡುವುದು. ಅವರಿಗೂ ನಮಗೂ ಅನ್ಯೋನ್ಯತೆಯಿತ್ತು. ಅವರು ರಾಜ್ಯದಿಂದ ಹೋಗುತ್ತಿದ್ದಾರೆ. ಜೊತೆಗೆ ರಾಜ್ಯಕ್ಕೆ ಹೊಸ ರಾಜ್ಯಪಾಲರಾಗಿ ಬರುತ್ತಿರುವ ಶ್ರೀಮಾನ್ ಚತುರ್ವೇದಿಯವರು ಅಷ್ಟೇ ಚತುರರಿರಬೇಕೆಂದು ಕಾಣುತ್ತದೆ. ಅವರಿಗೂ ಶುಭಕೋರಿ ಸ್ವಾಗತಿಸುತ್ತಾ ಇವೊತ್ತು ಯಾವ ವಿಷಯವನ್ನು ಇಲ್ಲಿ ಮಂಡಿಸಿದ್ದೇವೆ, ಅದನ್ನು ಅವರಿಗೆ ಕಳುಹಿಸಿಕೊಡುತ್ತೇವೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

(ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲ್‌ರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ತಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ.